# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು - 572 103

ದೂರವಾಣಿ : 0816-2254546 0816-2255596, 0816-2255597 ಫ್ಯಾಕ್ಸ್ : 0816-2270719

ಸಂಖ್ಯೆ: ತುವಿ:ಶೈವಿ:2018–19: [illegible] ದಿನಾಂಕ:13.11.2018

## ಸುತ್ತೋಲೆ

ವಿಷಯ : ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಭಾಗದ ನಾಲ್ಕನೇ ಸೆಮಿಸ್ಟರ್‌ಗೆ ಹೆಚ್ಚುವರಿ ಐಚ್ಛಿಕ ಪತ್ರಿಕೆಗಳನ್ನು ಅಳವಡಿಸಿಕೊಳ್ಳುವ ಬಗ್ಗೆ.

ಉಲ್ಲೇಖ: 1) ಅಧ್ಯಕ್ಷರು ಅಧ್ಯಯನ ಮಂಡಳಿ ಹಾಗೂ ವಿಭಾಗೀಯ ಪರಿಷತ್, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಭಾಗ, ತು.ವಿ.ತು ಇವರ ಪತ್ರ ದಿನಾಂಕ: 17.10.2018

2) ದಿನಾಂಕ : 27.10.2018 ರಂದು ನಡೆದ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ

3) ದಿನಾಂಕ : 29.10.2018 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ನಿರ್ಣಯ

4) ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ 05.11.2018

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರ ಪತ್ರದಲ್ಲಿ ಅಧ್ಯಕ್ಷರು, ಅಧ್ಯಯನ ಮಂಡಳಿ ಹಾಗೂ ವಿಭಾಗೀಯ ಪರಿಷತ್ ಇವರು ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಭಾಗದ ನಾಲ್ಕನೇ ಸೆಮಿಸ್ಟರ್‌ನ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ, ಹೆಚ್ಚುವರಿ ಐಚ್ಛಿಕ ಪತ್ರಿಕೆಗಳನ್ನು ಕೆಳಕಂಡ ಕೋಷ್ಟಕದಲ್ಲಿ ವಿವರಿಸಿರುವಂತೆ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಲು ಸದರಿ ಪತ್ರಿಕೆಗಳನ್ನು ಅಳವಡಿಸಿಕೊಳ್ಳುವ ಸಂಬಂಧ ನೂತನ ಪಠ್ಯಕ್ರಮವನ್ನು ರಚಿಸಿ ಅನುಮೋದನೆ ನೀಡುವಂತೆ ಕೋರಿ ಪಠ್ಯಕ್ರಮವನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ಸಕ್ಷಮ ಪ್ರಾಧಿಕಾರಗಳ ಅನುಮೋದನೆಗಾಗಿ ಮಂಡಿಸಲಾಗಿ, ಹೆಚ್ಚುವರಿ ಐಚ್ಛಿಕ ಪತ್ರಿಕೆಗಳನ್ನು ಉಲ್ಲೇಖ (2) & (3) ರಲ್ಲಿ ಸಕ್ಷಮ ಪ್ರಾಧಿಕಾರಗಳು ಅನುಮೋದಿಸಿರುತ್ತವೆ.

| Present Elective Papers | Additional / New Elective Papers |
|---|---|
| SPT 4.4 Indirect Taxes | SPT 4.4 Custom Duty and GST-I |
| SPT 4.5 AT-6 Commercial Taxes | SPT 4.5 AT-6 Goods & Service Tax-II |

ಈ ಹಿನ್ನೆಲೆಯಲ್ಲಿ 2018-19 ನೇ ಶೈಕ್ಷಣಿಕ ಸಾಲಿನಲ್ಲಿ ನಾಲ್ಕನೇ ಸೆಮಿಸ್ಟರ್ ಅಧ್ಯಯನ ಮಾಡುತ್ತಿರುವ ನವೀನ ವಿದ್ಯಾರ್ಥಿಗಳಿಗೆ ಸದರಿ ಹೆಚ್ಚುವರಿ ಐಚ್ಛಿಕ ಪತ್ರಿಕೆಗಳನ್ನು ಬೋಧಿಸಲು ಕ್ರಮ ಕೈಗೊಳ್ಳುವಂತೆ ಹಾಗೂ ಸದರಿ ಪಠ್ಯಕ್ರಮವನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲ www.tumkuruniversity.ac.in ನಲ್ಲಿ ಪ್ರಕಟಿಸಲಾಗಿದೆ ಎಂದು ಈ ಮೂಲಕ ತಿಳಿಸಲಾಗಿದೆ.

ಸೂಚನೆ: ಸಿ.ಬಿ.ಸಿ.ಎಸ್ ವಿನಿಯಮದ ನಾಲ್ಕನೇ ಸೆಮಿಸ್ಟರ್ ಪೂರಕ ವಿದ್ಯಾರ್ಥಿಗಳು ಈ ಹಿಂದೆ ಬೋಧನೆ ಮಾಡಿರುವ ಪಠ್ಯಕ್ರಮದಂತೆ ಪರೀಕ್ಷೆಗಳನ್ನು ಬರೆಯತಕ್ಕದ್ದು.

ಕುಲಸಚಿವರು 16-11-18

ಗೆ,

1. ಅಧ್ಯಕ್ಷರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮಂಡಳಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಡೀನರು, ವಾಣಿಜ್ಯ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮುಖ್ಯಸ್ಥರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಪ್ರಾಂಶುಪಾಲರುಗಳು, ಸಂಬಂಧಪಟ್ಟ ಸಂಯೋಜಿತ ಸ್ನಾತಕೋತ್ತರ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಕುಲಸಚಿವರು (ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. – ಸದರಿ ಪಠ್ಯಕ್ರಮವನ್ನು ಅಂತರ್ಜಾಲದಲ್ಲಿ ಪ್ರಕಟಿಸುವುದು

ಪ್ರತಿಗಳು:

1) ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಯವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

2) ಕಚೇರಿ ಪ್ರತಿ.